**ModernEducationSociety's**

# M.M. Arts & Science College, Sirsi, Uttara Kannada, Karnataka.YOUTHREDCROSS WING






**HenriDunant**, **FounderoftheRedCross** **RaghavendraHegde,YRC,Programmeofficer**

**YRC is the constituent of mother organization –Indian Red Cross Society. It is group moment organized for studentsincollegeandtechnicalinstitutions.ThestudentsaretrainedandencouragedtoparticipateinvariousYRCactivities .**

**Objectives:**(a)Taking careof their own health and thatof others.(b) Understanding and accepting of civicresponsibility.(c) Maintaining a spirit of friendliness and helpfulness towards other children in India and all over theworld.(d)DisseminationoftheRed Cross movement.

**FocusPoint**:HealthEducation **Vision:**Topromote servicemottoandhealthcare.

**Mission:**(a)Toattainglobalbestpracticesandbecomealeadinghealthpowergeneratingunit.(b)Tobearesponsible citizen nurturing human values and concern for society.(c) To improve the lives of local community.(d)To be a partner in nation building and contribute towards hygienic growth of life.(e) To promote a work culture thatfosterslearning,individualgrowth,teamspirit,socialcontactandcreativitytoovercomechallengesandattaingoals.
(f) To uphold the integrity and guiding principles of trust.(g)To respond to the needs of people who require healthcareon urgent basis.

**ABOUTTHEREDCROSSSOCIETYANDORIGIN**

The Indian Red Cross is a voluntary humanitarian organization having a network of over 700 branches throughout thecountry,providingreliefintimesofdisasters/emergenciesandpromoteshealthandcareofthevulnerablepeopleandcom munities.

IRCS was established in 1920 under the Indian Red Cross Society Act. The IRCS has 35 Sate/ Union Territories brancheswith their more than 700 districts and sub-district branches. His Excellency, the President of India is the President andhonorable UnionHealth MinisteristheChairmanoftheSociety.

**Thefunctioningofthewingwascommencedon30th March2005.**

**The wing is headed by the Principal of theCollege and coordinated by the programme**

**officer.TheHon'ble SecretaryM.E.S.isanadvisor.**

**YRC Unit of the College has been organizing the various activities in association with Govt.Hospital,Sirsi.I.M.A.Sirsi.TSSHospital,Sirsi.Taluka Administration, Sirsi and District administration Uttara Kannada. Someofthe activitiesare as mentioned below.**

- InaugurationofRedCrossWing
- FreeBloodGroupinganddonationCamp.
- Healthawarenesslectureprogramme.
- Processiontocreateawarenessonblooddonation
- WorldsHumanRightsday
- Generalmedicalcheckup
- participationinNationalRoadSafetyweek
- CelebrationofGenevaConventionday.
- ShramadanaonGandhijayanti.

1. 29-08-2018 Blood check up and Blood donation camp organized with the association of NSS,NCC, and TSS Hospital Sirsi.



2. 13-02-2019 Health check-up camp organised for the students of the college, association with IMA Sirsi. Around 600 students have taken the use of this camp.




3. Vanamahotsava Program was Organized in association with YRC on 10-08-19 in our college campus.




4. 28-08-2019 Blood check up and Blood donation camp organized with the association of NSS,NCC, and TSS Hospital Sirsi.



5. 21-09-2019 Word peace  Day was organised by YRC wing.




6. In association with Sirsi musnipal corporation ,NSS unit of Our College, YRC wing participated SwachaBharataAbhiyanajata on 01-10-2019.




7. 07-02-2019 Health check-up camp organized by YRC  for the students of the college, association with IMA Sirsi. Around 800 students have taken the use of this camp.



8.11-01-2021 YRC distributed Face masks to our college students







09. 15-11-2021 Blood check up and Blood donation camp organized with the association of NSS,NCC, and TSS Hospital Sirsi



10. 22-12-21 Drugs awareness program organized by YRC for the students of the college, association with IMA Sirsi.







11. 21-06-2022 Yoga day organized by YRC



12. 26-08-2022 Covid 19 Vaccination camp organized with the association of YRC, Government Hospital Sirsi.




13. 19-01-2023 Falicitation for blood doners, organized by YRC




14. 30-09-2022 Blood check up and Blood donation camp organized with the association of NSS,NCC, and TSS Hospital Sirsi



15. 21-06-2022 Yoga day organized by YRC




15. Vanamahotsava Program was Organized in association with YRC on 11-07-2023 in our college campus.



# ಶಾಂತಿ ಮನೋಧರ್ಮ ವ್ಯಕ್ತಿಯ ಶಕ್ತಿ



ಶಿರಸಿ: ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿಶ್ವ ಶಾಂತಿ ದಿನಾಚರಣೆ ನಡೆಸಲಾಯಿತು.

**ಶಿರಸಿ:** ಜಾಗತಿಕ ಶಾಂತಿ ದಿನದ ಅಂಗವಾಗಿ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ವಿಭಾಗ, ರೆಡ್‌ಕ್ರಾಸ್ ಘಟಕ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳ ಸಹಯೋಗದಲ್ಲಿ ಶಾಂತಿದಿನವನ್ನು ಮಹಾವಿದ್ಯಾಲಯದಲ್ಲಿ ಆಚರಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ। ಎ.ಕೆ. ಕಿಣಿ, ಪ್ರಪಂಚಕ್ಕೆ ಶಾಂತಿ ಸಂದೇಶ ಸಾರಿದ ದೇಶ ನಮ್ಮದು. ಗಾಂಧೀಜಿ ಶಾಂತಿ ತತ್ವವನ್ನು ಮೈಗೂಡಿಸಿಕೊಂಡ ದೇಶ ನಮ್ಮದು. ಇಂದು ನೆರೆಯ ದೇಶ ನಮ್ಮ ಶಾಂತಿಯ ದೇಯ ನಮ ದೌರ್ಬಲ ಎಂದು ಭಾವಿಸುತ್ತಿದೆ. ಆದರೆ ಶಾಂತಿ ಮನೋಧರ್ಮ ಪ್ರತಿಯೊಬ್ಬ ವ್ಯಕ್ತಿಯ ಶಕ್ತಿ, ಅದನ್ನು ವಿದ್ಯಾರ್ಥಿಗಳಾದ ನೀವು ಮೈಗೂಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದರು.

ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಬಿಳಿ ವಸ್ತ್ರ ಧರಿಸಿ ಬಂದಿದ್ದರು. ಕಾಲೇಜಿನಲ್ಲಿ ಶಾಂತಿದಿನದ ಸಂದೇಶವನ್ನು ಸಾರುವ ಭಿತ್ತಿಚಿತ್ರ ಹಾಗೂ ಭಿತ್ತಿ ಪತ್ರಿಕೆಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿ ಶಾಂತಿ ಸಂದೇಶ ಸಾರಿದರು. ಕಾಲೇಜಿನ ಪ್ರಾಧ್ಯಾಪಕರು, ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

11

# ಎಂಎಂ ಕಾಲೇಜಿನಲ್ಲಿ ಆರೋಗ್ಯ ತಪಾಸಣೆ



ಶಿರಸಿ: ನಗರದ ಎಂಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಯುವ ರೆಡ್‌ಕ್ರಾಸ್ ಘಟಕ ಹಾಗೂ ಐಎಂಎ ಇವರ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಸಾಮೂಹಿಕ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು. ಐಎಂಎಯ ಇಪ್ಪತ್ತಕ್ಕೂ ಹೆಚ್ಚು ವೈದ್ಯರು ಪಾಲ್ಗೊಂಡಿದ್ದರು. ವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಬರಬಹುದಾದ . ಖಾಯಿಲೆಗಳ ಬಗ್ಗೆ ತಿಳುವಳಿಕೆ ನೀಡುವುದರ ಜೊತೆಗೆ ಆರೋಗ್ಯದ ಕಾಳಜಿಯ ಕುರಿತು ತಿಳಿವಳಿಕೆ ನೀಡಲಾಯಿತು. ವಿದ್ಯಾಲಯದ ಪ್ರಾಚಾರ್ಯ ಎ.ಕೆ.ಕಿಣಿ, ಯುವ ರೆಡ್ ಕ್ರಾಸ್ ಘಟಕದ ರಾಘವೇಂದ್ರ ಜಾಜೀಗುಡ್ಡೆ ಹಾಗೂ ಉಪನ್ಯಾಸಕ ವೃಂದ ಉಪಸ್ಥಿತರಿದ್ದರು.

# ಅತಿಯಾಸೆಯಿಂದ ಪರಿಸರಕ್ಕೆ ಹಾನಿ

**ಶಿರಸಿ:** ನಗರದ ಎಮ್.ಎಮ್. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಎನ್‌ಸಿಸಿ, ಎನ್‌ಎಸ್‌ಎಸ್ ರೆಡ್ ಕ್ರಾಸ್ ಘಟಕಗಳ ಸಹಯೋಗದಲ್ಲಿ ಮಹಾವಿದ್ಯಾಲಯದಲ್ಲಿ ವನಮಹೋತ್ಸವ ಹಮ್ಮಿಕೊಳ್ಳಲಾಗಿತ್ತು.

ಪ್ರಾಚಾರ್ಯ ಡಾ.ಎ.ಕೆ.ಕಿಣಿ ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು ಇದು ದಿನಾಚರಣೆಗಷ್ಟೆ ಸೀಮಿತವಾಗಬಾರದು. ದಿನನಿತ್ಯದ ನಮ್ಮ ಕೈಂಕರ್ಯದ ಜೊತೆ ಪರಿಸರ ಸಂರಕ್ಷಣೆ ನಿಷ್ಠೆಯೂ ಕಾಣಬೇಕು ಎಂದರು. ಇಂದು ಮನುಷ್ಯ ತನ್ನ ಅತಿಯಾಸೆಗಾಗಿ ಪರಿಸರ ಹಾನಿಗೊಳಿಸುತ್ತಿದ್ದಾನೆ. ವಿದ್ಯಾರ್ಥಿಗಳಾದ ನೀವು ಈಗಿನಿಂದಲೇ ಪರಿಸರದ ತೆರನಾಗಿ ಪ್ರೀತಿಯನ್ನ, ಕಾಳಜಿಯನ್ನ ಹೊಂದಬೇಕಾಗಿದೆ ಎಂದರು. ಮಹಾವಿದ್ಯಾಲಯದ ವಿದ್ಯಾರ್ಥಿಗಳು ನಾನಾ ತಳಿಯ ಗಿಡಗಳನ್ನು ನೆಟ್ಟರು. ಎನ್‌ಸಿಸಿ ಅಧಿಕಾರಿ ಪ್ರೊ.ಟಿ.ಎಸ್.ಹಳೆಮನೆ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಸಿಬ್ಬಂದಿ ಕಾರ್ಯದರ್ಶಿ ಪ್ರೊ. ಜಿ.ಟಿ. ಭಟ್ ಎನ್‌ಎಸ್‌ಎಸ್ ಅಧಿಕಾರಿ ಪ್ರೊ. ಕೆ.ಎನ್. ರೆಡ್ಡಿ, ರೆಡ್‌ಕ್ರಾಸ್ ಕಾರ್ಯಕ್ರಮ ಅಧಿಕಾರಿ ಪ್ರೊ. ರಾಘವೇಂದ್ರ ಹೆಗಡೆ ಉಪಸ್ಥಿತರಿದ್ದರು.

# ರಕ್ತದಾನದಿಂದ ದೇಹ ಸದೃಢ

**ಶಿರಸಿ:** ರಕ್ತದಾನ ನಿಸ್ವಾರ್ಥ ದಾನ. ಮಾನವನಿಗೆ ದೈಹಿಕ ಆರೋಗ್ಯ ಮುಖ್ಯ ಶಾರೀರಿಕವಾಗಿ ಸದೃಢವಾಗಿದ್ದರೆ ಮಾತ್ರ ರಕ್ತದಾನ ಮಾಡಲು ಸಾಧ್ಯ. ನಮ್ಮ ದೇಹದ ರಕ್ಷಣೆ ನಮ್ಮ ಹೊಣೆ. ಹೀಗಾಗಿ ಯುವಕರು ರಸ್ತೆ ನಿಯಮ ಪಾಲಿಸಿ ನಿಧಾನವಾಗಿ ವಾಹನ ಚಲಾಯಿಸಿ ಎಂದು ಟಿಎಸ್‌ಎಸ್ ಆಸ್ಪತ್ರೆ ರಕ್ತನಿಧಿಯ ವೈದ್ಯಾಧಿಕಾರಿ ಪಿ. ಎಸ್.ಹೆಗಡೆ ಹೇಳಿದರು.





ಶಿರಸಿಯಲ್ಲಿ ನಡೆದ ರಕ್ತ ವರ್ಗೀಕರಣ ಮತ್ತು ರಕ್ತದಾನ ಶಿಬಿರದಲ್ಲಿ ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಇಲ್ಲಿಯ ಎಂಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಇಂಡಿಯನ್ ಯುತ್ ರೆಡ್ ಕ್ರಾಸ್ ವಿಂಗ್ ,ಎನ್‌ಎಸ್ ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ ಹಾಗೂ ವಿದ್ಯಾರ್ಥಿ ಕಲ್ಯಾಣ ವಿಭಾಗ ಸಹಯೋಗಲ್ಲಿ ನಡೆದ ರಕ್ತ ವರ್ಗೀಕರಣ ಮತ್ತು ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ಪ್ರಾಂಶುಪಾಲ ಎ.ಕೆ. ಕಿಣಿ ಮಾತನಾಡಿ, ರಕ್ತದಾನದಿಂದ ಇನ್ನೊಂದು ಜೀವ ಉಳಿಸಿದ ಕೀರ್ತಿ ನಮ್ಮದಾಗಬೇಕು. ನಿತ್ಯ ಹತ್ತಾರು ಅಪಘಾತಗಳು ನಡೆಯುತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ರಕ್ತದಾನ ಮಾಡುವುದರ ಮೂಲಕ ನಾವೂ ಸಾಮಾಜಿಕ ಹೊಣೆಗಾರಿಕೆ ತೋರಿಸಬೇಕು. ಇಂದು ಬೇಡಿಕೆಯ ಅರ್ಧದಷ್ಟು ಕೂಡ ರಕ್ತ ಪೂರೈಸಲು ಆಗುತ್ತಿಲ್ಲ ಎಂದರು. ಎನ್‌ಸಿಸಿ ಅಧಿಕಾರಿ ಟಿ.ಎಸ್. ಹಳೆಮನೆ, ಎನ್‌ಎಸ್ ಎಸ್ ಅಧಿಕಾರಿ ಪ್ರೊ.ಕೆ.ಎನ್. ರೆಡ್ಡಿ, ರೆಡ್ ಕ್ರಾಸ್ ಅಧಿಕಾರಿ ಪ್ರೊ.ರಾಘವೇಂದ್ರ ಹೆಗಡೆ, ಸುಜಾತಾ ಪಾತ್ರಪೇಕರ್, ಪ್ರೊ. ರವಿ ಕೊಳೇಕರ್ ಉಪಸ್ಥಿತ ರಿದ್ದರು. ಪ್ರೊ. ಎಸ್.ಎಂ. ಕಮ್ಮಳ್ಳಿ ವಂದಿಸಿ ದರು. ಕಾಲೇಜಿನ 30 ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ನೂರಾರು ವಿದ್ಯಾರ್ಥಿಗಳು ರಕ್ತ ವಿಂಗಡಣೆ ಮಾಡಿಸಿಕೊಂಡರು.

# ಸಸಿ ನೆಡುವುದು ಕಾರ್ಯಕ್ರಮಕ್ಕೆ ಮಾತ್ರ ಸೀಮಿತವಾಗಬಾರದು

»ಜನಮಾಧ್ಯಮ, ಶಿರಸಿ: ಎಂಇಎಸ್‌ನ ಎಂಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಎನ್‌ಸಿ ಸಿ, ಎನ್ ಎಸ್ ಎಸ್, ರೆಡ್ ಕ್ರಾಸ್, ಸ್ಕೌಟ್ಸ್ ಗೈಡ್ಸ್ ವಿಭಾಗಗಳ ಅಡಿಯಲ್ಲಿ ಐಕ್ಯೂ ಎಸಿ ಸಂಯೋಜನೆಯಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಕಾಲೇಜು ಉಪಸಮಿತಿ ಅಧ್ಯಕ್ಷ ಎಸ್.ಕೆ. ಭಾಗವತ್ ಸಸಿ ನೆಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿಮಾತನಾಡಿ, ಪ್ರತಿ ವರ್ಷ ಮಳೆಗಾಲದಲ್ಲಿ ಎಲ್ಲೆಡೆ ವನಮಹೋತ್ಸವ ಆಚರಿಸುತ್ತಾರೆ. ನಂತರ ನೆಟ್ಟ ಸಸಿಯ ಆರೈಕೆ ಮಾಡದೆ ಸಸಿಗಳು ಸತ್ತು ಹೋಗುವುದೇ ಹೆಚ್ಚು. ವಿದ್ಯಾರ್ಥಿಗಳು ನೆಟ್ಟ ಗಿಡಗಳನ್ನು ಪರೀಕ್ಷಿಸಿ



ಅದು ಬದುಕಿ ಮರವಾಗುವಂತೆ ನೋಡಿಕೊಳ್ಳಬೇಕು. ಸಸಿ ನೆಡುವುದು ಕಾರ್ಯಕ್ರಮಕ್ಕೆ ಮಾತ್ರ ಸೀಮಿತವಾಗಬಾರದು. ಹಸಿರಿದ್ದರೆ ಉಸಿರು. ಹಾಗಾಗಿ ಪರಿಸರವನ್ನು ರಕ್ಷಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೈ ಜೋಡಿಸಬೇಕು. ಪಶ್ಚಿಮಘಟ್ಟದ ಪ್ರದೇಶದಲ್ಲಿ ಪರಿಸರ ನಾಶವಾದರೆ ಇಡೀ ಜಗತ್ತಿನ ಮೇಲೆ ಪರಿಣಾಮ ಬೀರುತ್ತದೆ ಎಂದು ಪರಿಸರ ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಹಾಗಾಗಿ ಪಶ್ಚಿಮಘಟ್ಟದ ತಪ್ಪಲಿನಲ್ಲಿರುವ ನಾವು ಪರಿಸರ ಸಂರಕ್ಷಣೆಯಲ್ಲಿ ದೊಡ್ಡ ಜವಾಬ್ದಾರಿ ಹೊಂದಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಟಿ.ಎಸ್. ಹಳೆಮನೆ, ಪ್ರಾಧ್ಯಾಪಕರು, ಶಿಕ್ಷಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಗಿಡಗಳನ್ನು ನೆಟ್ಟರು.

# 764 ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ

**ಶಿರಸಿ:** ನಗರದ ಎಂ ಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕ ಹಾಗೂ ಭಾರತೀಯ ವೈದ್ಯಕೀಯ ಸಂಘಗಳ ಸಹಯೋಗದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಭಾರತೀಯ ವೈದ್ಯಕೀಯ ಸಂಘದ 20 ವೈದ್ಯರು ಸುಮಾರು 764 ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಎ.ಕೆ ಕಿಣಿ, ರೆಡಕ್ರಾಸ್ ಕಾರ್ಯಕ್ರಮಾಧಿಕಾರಿ ರಾಘವೇಂದ್ರ ಹೆಗಡೆ ಉಪಸ್ಥಿತರಿದ್ದರು.





ಶಿರಸಿ ಎಂ.ಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

## ಡ್ರಗ್ಸ್: ಬೆಂಗಳೂರಿನ ಅರ್ಧದಷ್ಟು ಪ್ರಕರಣ ಶಿರಸಿಯಲ್ಲಿ -ಡಾ. ದಿನೇಶ

ಜನಮಾಧ್ಯಮ, ಶಿರಸಿ: ಇತ್ತೀಚಿನ ದಿನಗಳಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಡ್ರಗ್ಸ್ ಮುಂತಾದ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ.ಬೆಂಗಳೂರಿನ ಅರ್ಧದಷ್ಟು ಪ್ರಕರಣ ಶಿರಸಿಯಲ್ಲಿ ಕಾಣುತ್ತಿದೆ ಎಂದು ಡಾ.ದಿನೇಶ್ ಹೆಗಡೆ ಆತಂಕ ವ್ಯಕ್ತಪಡಿಸಿದರು.



ಅವರು ರೋಟರಿ ಕ್ಲಬ್ ಮತ್ತು ಎಂ ಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕದ ಸಹಯೋಗದೊಂದಿಗೆ ಆಯೋಜಿಸಿದ್ದ ವ್ಯಸನಮುಕ್ತ ಸಮಾಜ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ತಂಬಾಕು ಪದಾರ್ಥಗಳ ಸೇವನೆ, ಕುಡಿತ,ಮಾದಕ ದ್ರವ್ಯದ ಗೀಳು, ಧೂಮ್ರಪಾನ ಮತ್ತು ಮೊಬೈಲ್ ಅಂತರ್ಜಾಲದ ನಿರಂತರವಾದ ಬಳಕೆ ಇವೆಲ್ಲ ಆರೋಗ್ಯದ ಮೇಲೆ ಮಾರಣಾಂತಿಕ ದುಷ್ಪರಿಣಾಮಗಳನ್ನು ಬೀರುತ್ತದೆ. ಹದಿ ಹರೆಯದ ವಯಸ್ಸಿನಲ್ಲೇ ಇಂತಹ ದುಶ್ಚಟಗಳಿದೆ ದಾಸರಾಗುತ್ತಿದ್ದಾರೆ. ಕ್ಯಾನ್ಸರ್, ಕುರುಡುತನ, ಮಾನಸಿಕ ಸಮಸ್ಯೆ, ಅಸ್ತಮಾ, ಹೃದಯಾಘಾತ,ಲಿವರ್ ಸಮಸ್ಯೆಗಳಂಥ ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುವವರ ಸಂಖ್ಯೆ ಏರಿಕೆ ಆಗುತ್ತಿದೆ. ವಿದ್ಯಾರ್ಥಿಗಳು ಮನಸ್ಸನ್ನು ಹಿಡಿತದಲ್ಲಿ ಇರಿಸಿಕೊಳ್ಳುವುದಲ್ಲದೆ ಯೋಗ, ವ್ಯಾಯಾಮ ಮಾಡುವ ರೂಢಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಿ. ದುಶ್ಚಟಗಳಿಂದ ದೂರವಿರಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ। ಕೋಮಲಾ ಭಟ್ ವಹಿಸಿದ್ದರು. ರೊ। ಪಾಂಡುರಂಗ ಪೈ, ಸುಧೇಂದ್ರ ದೇಶಪಾಂಡೆ, ಶ್ರೀನಿವಾಸ್, ನಿವೃತ್ತ ಪ್ರಾಚಾರ್ಯ ಹೊಸಮನಿ, ದೈಹಿಕ ನಿರ್ದೇಶಕ ಪ್ರಶಾಂತ್ ದೇವಾಡಿಗ ಹಾಗೆಯೇ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ ರಾಘವೇಂದ್ರ ಹೆಗಡೆ ಸ್ವಾಗತಿಸಿ ನಿರೂಪಿಸಿದರು.

## ಪರಿಸರ ಸಂರಕ್ಷಣೆ ಎಲ್ಲರ ಹೊಣೆ

ಶಿರಸಿ, ಜು.10: ಇಲ್ಲಿಯ ಎಮ್.ಎಮ್. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಎನ್.ಸಿ.ಸಿ., ಎನ್.ಎಸ್.ಎಸ್. ರೆಡ್‌ಕ್ರಾಸ್ ಘಟಕಗಳ ಸಹಯೊಗದಲ್ಲಿ ಮಹಾವಿದ್ಯಾಲಯದಲ್ಲಿ ವನಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ಎ.ಕೆ. ಕಿಣಿ ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು, ಇದು ದಿನಾಚರಣೆಗಷ್ಟೆ ಸೀಮಿತವಾಗಿರಬಾರದು. ದಿನನಿತ್ಯದ ನಮ್ಮ ಕೈಂಕರ್ಯದ ಜೊತೆಜೊತೆಗೆ ಪರಿಸರ ಸಂರಕ್ಷಣೆ ನಿಷ್ಠತೆಯು ಕಾಣಬೇಕು. ಇಂದು ಮನುಷ್ಯ ತನ್ನ ಅತಿಯಾಸೆಯಿಂದ ಪರಿಸರವನ್ನು ದಿನನಿತ್ಯ ಹಾನಿಗೊಳಪಡಿಸುತ್ತಿದ್ದಾನೆ. ವಿದ್ಯಾರ್ಥಿಗಳು ಈಗಿನಿಂದಲೇ ಪರಿಸರದ ಕುರಿತು ಪ್ರೀತಿ. ಕಾಳಜಿಯನ್ನೂ ಹೊಂದಬೇಕು ಎಂದರು.

ವಿದ್ಯಾರ್ಥಿಗಳು ವಿವಿಧ ಜಾತಿಯ ಗಿಡಗಳನ್ನು ನೆಟ್ಟರು. ಎನ್.ಸಿ.ಸಿ. ಅಧಿಕಾರಿ ಡಾ. ಟಿ.ಎಸ್. ಹಳೆಮನೆ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಸಿಬ್ಬಂದಿ ಕಾರ್ಯದರ್ಶಿ ಪ್ರೊ. ಜಿ.ಟಿ. ಭಟ್. ಎನ್.ಎಸ್.ಎಸ್. ಅಧಿಕಾರಿ ಪ್ರೊ. ಕೆ.ಎನ್. ರೆಡ್ಡಿ, ರೆಡ್‌ಕ್ರಾಸ್ ಕಾರ್ಯಕ್ರಮ ಅಧಿಕಾರಿ ಪ್ರೊ. ರಾಘವೇಂದ್ರ ಹೆಗಡೆ ಉಪಸ್ಥಿತರಿದ್ದರು.



********